**ದಿನಾಂಕಃ 11/12/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು: 3 ನೇ ಪ್ರತಿವಾದಿ ಪರ ಶ್ರೀ. ಎಸ್ ಎಸ್ ವಕೀಲರಿಂದಃ**

4. ಕಯುಮ್ ಶರೀಪ್ ರವರು ನನ್ನ ತಂದೆ ಮರಣಗೊಳ್ಳುವ ಮುನ್ನ ಮರಣಗೊಂಡಿದ್ದರು ಎಂದರೆ ಸರಿ. ಕಯುಮ್ ಶರೀಪ್ ರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಕಯುಮ್ ಶರೀಪ್ ನನ್ನ ತಂದೆ ಮರಣ ಗೊಳ್ಳುವ ಮುನ್ನ ಮರಣ ಗೊಂಡಿದ್ದರಿಂದ ಅವರ ಹೆಂಡತಿ ಮಕ್ಕಳಿಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಬಾಗ ಬರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಗಂಡ ನನ್ನ ತಂದೆ ಮರಣ ಗೊಂಡ ನಂತರ ಮರಣ ಹೊಂದಿದ್ದಾರೆ ಎಂದರೆ ಸರಿ. ನನ್ನ ತಾಯಿ ಅಪ್ತಾಬ್ ಶರೀಪ್ ಮರಣ ಗೊಳ್ಳುವ ಮುನ್ನ ಮರಣಗೊಂಡಿದ್ದು ಎಂದರೆ ಸರಿ. ನನ್ನ ತಾಯಿ ಮತ್ತು ನನ್ನ ತಂದೆ ತೀರಿಕೊಂಡ ನಂತರ ಅಪ್ತಾಬ್ ಶರೀಪ್ ರವರಿಗೆ ದಾವಾ ಸ್ವತ್ತುಗಳ ಖಾತೆ ಆಗಿದೆ ಎಂದರೆ ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಬದುಕಿರುವಾಗ 9 ರಿಂದ 13 ರವರ ಮದುವೆ ಆಗಿತ್ತು, ಆದರೆ ಅಪ್ತಾಬ್ ಶರೀಪ್ ಮತ್ತು ಅಸ್ಮತ್ ಉನ್ನೀಸಾ ರವರ ಮದುವೆ ಆಗಿರಲಿಲ್ಲ. 14 ನೇ ಪ್ರತಿವಾದಿಯ ಮದುವೆಯನ್ನು ಅಪ್ತಾಬ್ ಶರೀಪ್ ರವರೇ ಮಾಡಿದ್ದರು ಎಂದರೆ ಸರಿ.

5. ನಾವೆಲ್ಲರೂ ಮದುವೆ ಆದ ನಂತರ ನಮ್ಮ ಗಂಡಂದಿರ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ನನ್ನ ತಂದೆ ತಾಯಿ ತೀರಿಕೊಂಡ ನಂತರ ಅಪ್ತಾಬ್ ಶರೀಪ್ ರವರೇ ದಾವಾ ಸ್ವತ್ತುಗಳನ್ನು ಅಬಿವೃದ್ದಿ ಮತ್ತು ಸಾಲಗಳನ್ನು ಪಡೆಯುತ್ತಿದುದು ಎಂದರೆ ಸರಿ. 14 ನೇ ಪ್ರತಿವಾದಿಯ ಮದುವೆಯನ್ನು ಅಪ್ತಾಬ್ ಶರೀಪ್ ರವರು ವಿಜ್ರುಂಬಣೆಯಿಂದ ಮಾಡಿದ್ದರು ಎಂದರೆ ಸರಿ, ಸಾಕ್ಷಿಯು ಮುಂದುವರೆದು, ನಮ್ಮ ಜಮೀನನ್ನು ಮಾರಾಟ ಮಾಡಿ ಮತ್ತು ಸಾಲವನ್ನು ಪಡೆದು ಮಾಡಿದ್ದರು, ಆ ಸಾಲವನ್ನು ನಾವೇ ಹೆಣ್ಣು ಮಕ್ಕಳು ತೀರಿಸಿದ್ದೇವೆ ಎಂದು ನುಡಿಯುತ್ತಾರೆ. ನನ್ನ ತಂದೆ ನಮ್ಮ

ಮದುವೆಯನ್ನು ಸಾಲ ಮಾಡಿ ಮಾಡಿದ್ದರು ಎಂದರೆ ಸರಿಯಲ್ಲ. ಅಪ್ತಾಬ್ ಶರೀಪ್ ರವರು 14 ನೇ ಪ್ರತಿವಾದಿಯ ಮದುವೆಗೆಂದು ಯಾವುದೇ ಜಮೀನನ್ನು ಮಾರಾಟ ಮಾಡಿಲ್ಲ ಮತ್ತು ಸಾಲ ಪಡೆದಿರಲಿಲ್ಲ ಎಂದರೆ ಸರಿಯಲ್ಲ. ನಾವು ಮದುವೆ ಮಾಡಿಕೊಂಡು ಗಂಡನ ಮನೆಯಲ್ಲಿ ಇದ್ದುದರಿಂದ ಅಪ್ತಾಬ್ ಶರೀಪ್ ರವರೇ ಸ್ವತ್ತುಗಳನ್ನು ಅಬಿವೃದ್ಧಿ ಪಡಿಸಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅಪ್ತಾಬ್ ಶರೀಪ್ ಮರಣಗೊಂಡ ನಂತರ 3 ನೇ ಪ್ರತಿವಾದಿಗೆ ಮನೆಯನ್ನು ಕೊಡದೇ ಕಿರುಕುಳ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ಅಪ್ತಾಬ್ ಶರೀಪ್ ರವರು 4 ನೇ ಪ್ರತಿವಾದಿಯನ್ನು 2 ನೇ ಮದುವೆ ಆಗಿದ್ದಾರೆ ಎಂದರೆ ಸರಿ. 4 ನೇ ಪ್ರತಿವಾದಿಗೆ 5 ರಿಂದ 8 ನೇ ಪ್ರತಿವಾದಿಗಳು ಮಕ್ಕಳು ಎಂದರೆ ಸರಿ. ದಾವಾ ಸ್ವತ್ತುಗಳನ್ನು 3 ನೇ ಪ್ರತಿವಾದಿಯ ಗಂಡ ಉಳಿಸಿಕೊಂಡಿದ್ದರಿಂದ ಅದನ್ನು ಕಬಳಿಸಲು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳಿಗೂ ಸಹ ಯಾವುದೇ ಭಾಗಾಂಶದ ಹಕ್ಕು ಇಲ್ಲದ ಕಾರಣ ಅವರನ್ನು ಮೋಸದಿಂದ ದಾವೆಯಲ್ಲಿ ತೋರಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಇದ್ದಾಗ ಯಾವುದೇ ಬ್ಯಾರನ್ ಮನೆ ಕಟ್ಟಿರಲಿಲ್ಲ ಎಂದರೆ ಸರಿಯಲ್ಲ. ಬ್ಯಾರನ್ ಮನೆಯು 3 ನೇ ಪ್ರತಿವಾದಿಯ ಗಂಡ ಅಪ್ತಾಬ್ ಶರೀಪ್ ರವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಯಾವುದೇ ಭಾಗದ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>**

**<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>**

**1 ನೇ ಹೆ.ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**